

# ಹೊಸ ವರ್ಷದ ಹಾರ್ದಿಕ ಅಭಿನಂದನೆಗಳು – 2019

ಆತ್ಮೀಯ ಬಂಧುಗಳೇ,

ಹೊಸ ವರ್ಷದ ಶುಭಾಶಯಗಳು. ಮತ್ತೊಮ್ಮೆ ನಾವು ಹೊಸ ವರ್ಷದ ಸ್ವಾಗತವನ್ನು ಸಂಭ್ರಮದಿಂದ ಮಾಡೋಣ. ಈ ವರ್ಷವು ನಮಗೆ, ನಮ್ಮ ದೇಶಕ್ಕೆ ಹಾಗೂ ನಮ್ಮ ಎಲ್ಲ ಜನರಿಗೆ ತರಬಹುದಾದ ಸುಖಸಮೃದ್ಧಿಗಳ ಆಶಾದಾಯಕ ಹೊಂಗಿರಣವನ್ನು ಕಾಣುತ್ತ, ನಮ್ಮ ಕರ್ತವ್ಯಗಳನ್ನು ಉತ್ಸಾಹದಿಂದ ಪಾಲಿಸುತ್ತ, ಜೀವನದ ಪಯಣದಲ್ಲಿ ಮತ್ತೊಂದು ಮೈಲಿಗಲ್ಲನ್ನು ಯಶಸ್ವಿಯಾಗಿ ದಾಟೋಣ ಎಂಬ ಸಂಕಲ್ಪದೊಂದಿಗೆ ಒಮ್ಮನಸ್ಸಿನಿಂದ ೨೦೧೯ನ್ನು ಬರಮಾಡಿಕೊಳ್ಳೋಣ. ನಮ್ಮ ವೈಯಕ್ತಿಕ ಪ್ರಗತಿ ಹಾಗೂ ಆನಂದವು ಎಷ್ಟು ಲೋಭನೀಯವೋ ಅಷ್ಟೇ ವಾಂಛನೀಯ ದೇಶ ಹಾಗೂ ಸಮಾಜದ ಪ್ರಗತಿ — 'ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾಃ, ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿದ್-ದುಃಖಭಾಗ್-ಭವೇತ್' — ಇದು ನಮ್ಮ ಪ್ರಾರ್ಥನೆಯಾಗಲಿ. ಎಲ್ಲರ ಸುಖದಲ್ಲಿ ನಮ್ಮ ಸುಖವನ್ನು ಕಾಣುವ ಉದಾರ-ನಿಃಸ್ವಾರ್ಥ ಮನೋಭಾವ ನಮ್ಮದಾಗಲಿ ಎಂದು ಹಾರೈಸುತ್ತ ನಿಮಗೆಲ್ಲರಿಗೂ ಭಗವಂತನ ಕೃಪೆ-ಆಶೀರ್ವಾದಗಳು ಲಭಿಸಲಿ ಎಂದು ಪ್ರಾರ್ಥಿಸುತ್ತೇವೆ. ಈ ಶುಭಹಾರೈಕೆಗಳೊಂದಿಗೆ 'ಚಿಕಾಗೋ ಉಪನ್ಯಾಸಗಳು - ೧೨೫' ಎಂಬ ಈ ವರ್ಷದ ವಿಶೇಷ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ವಿಶ್ವವೇದಿಕೆಯಲ್ಲಿ ೧೮೯೩ರಲ್ಲಿ ಮೊಳಗಿದ ದಿವ್ಯವಾಣಿಯು ಇಂದು ವಿಶ್ವದಾದ್ಯಂತ ಅನುರಣಿಸುತ್ತಿದೆ. ಮತಾಂಧತೆಯ ಕರಾಳ ಶಕ್ತಿಯನ್ನು ಧ್ವಂಸ ಮಾಡಿ ವಿಶ್ವಶಾಂತಿ, ಸಾಮರಸ್ಯ , ಪರಸ್ಪರ ವಿಶ್ವಾಸ - ಗೌರವ, ಭಾವನೆಗಳ ಸ್ವೀಕಾರ ಮುಂತಾದ ಸಾರ್ವತ್ರಿಕ ಮೌಲ್ಯಗಳನ್ನು ಹೊಸ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನು ಸ್ವಾಮೀಜಿ ಅಲ್ಲಿ ಸಾರಿದ್ದರು; ಇಂದಿಗೂ ಈ ಆಶಯಗಳು ಜಾಗತಿಕ ಮಟ್ಟದಲ್ಲಿ ಅತ್ಯಂತ ಪ್ರಸ್ತುತವಾಗಿವೆ; ಮಹತ್ವದ್ದಾಗಿವೆ. ಆ ಉಜ್ಜ್ವಲ ಭಾಷಣ ಮೊಳಗಿ ೧೨೫ ವರ್ಷಗಳೇ ಸಂದವು. ಆದರೂ ಸ್ವಾಮೀಜಿಯ ವಾಣಿ ಸಹೃದಯದರ ಹಾಗೂ ಪ್ರಜ್ಞಾವಂತರ ಹೃದಯ ಹಾಗೂ ನರನಾಡಿಗಳಲ್ಲಿ ಇಂದಿಗೂ ಮಿಡಿಯುತ್ತಿದೆ.

'ವಿವೇಕಪ್ರಭ' ಪತ್ರಿಕೆಯ ಮೂಲಕ ರಾಮಕೃಷ್ಣ-ವಿವೇಕಾನಂದರ ಸಮನ್ವಯ ವಾಣಿಯನ್ನು ಬಿತ್ತರಿಸುವಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಆಶ್ರಮಗಳಿಗೆ, ಸಂಸ್ಥೆಗಳಿಗೆ, ಸ್ವಯಂಸೇವಕರಿಗೆ, ಬಂಧುಮಿತ್ರರಿಗೆ, ಸಿಬ್ಬಂದಿ ವರ್ಗದವರಿಗೆ, ಜಾಹೀರಾತುದಾರರಿಗೆ, ಅಚ್ಚುಕಟ್ಟಾಗಿ ಮುದ್ರಿಸುತ್ತಿರುವ ಮುದ್ರಕರಿಗೆ, ಹಾಗೂ ಸಹಕಾರ ನೀಡುತ್ತಿರುವ ಸರಕಾರಿ ಇಲಾಖೆಗಳಿಗೆ, ಅಂಚೆಕಛೇರಿಯವರಿಗೆ ಪ್ರೀತಿಯ ಧನ್ಯವಾದಗಳು. ತಮ್ಮೆಲ್ಲರ ಸಹಕಾರವು ನಮ್ಮ ಈ ನೆಚ್ಚಿನ ಪತ್ರಿಕೆಯನ್ನು ಮನೆಮನೆಗೆ, ಮನಮನಕ್ಕೆ ಮುಟ್ಟಿಸುವಲ್ಲಿ ಎಂದೆಂದೂ ಇರಲಿ ಎಂದು ಆಶಿಸುತ್ತೇವೆ. ನಿಮ್ಮ ಬೆಂಬಲ ಹಾಗೂ ಪ್ರೋತ್ಸಾಹವು ನಮಗೆ ಹೊಸ ಹೊಸ ಮೈಲಿಗಲ್ಲುಗಳನ್ನು ದಾಟುವಂತೆ ಮಾಡಲಿ.

ಜೈ ರಾಮಕೃಷ್ಣ!

ಭಗವತ್ಸೇವೆಯಲ್ಲಿ ತಮ್ಮ
ಸ್ವಾಮಿ ಆತ್ಮಜ್ಞಾನಂದ
ವ್ಯವಸ್ಥಾಪಕ ಸಂಪಾದಕರು